ಯುಗಾದಿ ಪ್ರಬಂಧ ಸ್ಪರ್ಧೆ

ತೀರ್ಪುಗಾರರ ಮೆಚ್ಚುಗೆ ಪಡೆದ ಪ್ರಬಂಧ

■ ಮಧುಸೂದನ ವೈ.ಎನ್.

ಕಲೆ: ವಿಶ್ವನಾಥ ಎ.ಎಸ್.

# ಪೇಟೆ ಎಂಬ ಸಂಬಂಧ





ಬೆಂಗಳೂರು ನಗರ ವಾಸಿಗಳಿಗೆ ಇದು ಅನುಭವ ಆಗಿರಬಹುದು. ರಸ್ತೆಗುಂಟ ನಡೆದುಕೊಂಡು ಹೋಗುತ್ತಿರುತ್ತೀರಿ. ಅಲ್ಲೆಲ್ಲೋ ಮರೆಯಲ್ಲಿ ಬಿಳಿ ವಸ್ತ್ರಧಾರಿ ಪೊಲೀಸರು ಇದ್ದಕ್ಕಿದ್ದಂತೆ ಗೋಚರಿಸುತ್ತಾರೆ. ಅದಾಗಲೇ ಮೂರ್ನಾಲ್ಕು ವಾಹನಗಳನ್ನು ನಿಲ್ಲಿಸಿ ದಂಡ ಕಟ್ಟಿಸಿಕೊಳ್ಳುತ್ತಿರುತ್ತಾರೆ. ಅವರನ್ನು ಕಂಡ ತಕ್ಷಣ ನಿಮ್ಮ ಪಾದಗಳು ನಿಮ್ಮನ್ನು ಎಳೆದುಕೊಂಡು ಔಟಿಕೊಳ್ಳಲು ಹೊಂಚುಹಾಕುತ್ತವೆ! ನಿಧಾನಕ್ಕೆ ಹೊಳೆಯುತ್ತದೆ, ನೀವು ನಟರಾಜ ಸರ್ವೀಸಿನಲ್ಲಿರುವಿರೆಂದು. ಆ ಮಟ್ಟಿಗಿನ ಸಂಬಂಧ ಈ ನಗರದ ನಿವಾಸಿಗಳದ್ದು, ಇಲ್ಲಿನ ಟ್ರಾಫಿಕು ಪೊಲೀಸಿನವರದ್ದು. ಅವರನ್ನು 'ಪೊಲೀಸ್ ಮಾಮ' ಎಂದು ಕರೆಯುತ್ತೇವೆ. ಕೆಲವೊಮ್ಮೆ ನೀವು ಯಾವುದೋ ಮೂಲೆಯಲ್ಲಿ ಅವಿತಿರುವ ರಿಪೇರಿ ಅಂಗಡಿ ಹುಡುಕುತ್ತಿದ್ದಲ್ಲಿ ಮೆಲ್ಲಗೆ ಹಿಂದಿನಿಂದ ನಿಮ್ಮ ಬಳಿ ಸಾರಿ ಕಿವಿಗೆ ಏನನ್ನೋ ಉಸುರಿಹೋಗುತ್ತಾರೆ, ಅವರನ್ನೂ ನಾವು 'ಮಾಮ' ಎಂದೇ ಕರೆಯುತ್ತೇವೆ. ಇನ್ನು ಪಾರ್ಕಿನಲ್ಲಿ ಮುಸ್ಸಂಜೆಯ ತನಕ ಗೆಳತಿ ಜೊತೆ ಕುಳಿತಿದ್ದಿರೋ, ನೆಲಕ್ಕೆ ಲಾಟಿ ಬಡಕೊಂತ ಬರುತ್ತಾರೆ 'ಖಾಕಿ ಮಾಮಗಳು'. ಬಾಡಿಗೆ ಮನೆ, ಸೈಟು ಪೈಟು ಕೊಡಿಸುತ್ತೀವೆಂಬ ರಿಯಲ್ ಎಸ್ಟೇಟ್ ಮಾಮಗಳು, ಗಂಡಿಗೆ ಹೆಣ್ಣು, ಹೆಣ್ಣಿಗೆ ಗಂಡು ಹುಡುಕುವ ಬ್ರೋಕರ್ ಮಾಮಗಳು, ಎಲ್ಲಿ ನೋಡಿದರಲ್ಲಿ ಮಾಮ! ಈ ನಗರದಲ್ಲಿ ಮಾಮ ಎಂದರೆ ನಿಮ್ಮಿಂದ ಏನನ್ನೋ ಪೀಕುವ ಮಂದಿ ಎಂದರ್ಥ. ಬಳಕೆಯು ಬಹುಶಃ 'ಮಾಮೂಲಿ' ವಸೂಲಿ ಮಾಡುವ ಎಂಬ ಮೂಲದಿಂದ ಹುಟ್ಟಿರಬಹುದೇ?

ಈ ಗದ್ದಲದಲ್ಲಿ ನಮ್ಮೆಲ್ಲರ ನಿಜಾರ್ಥದ ಮಾಮ ಕಳೆದೇ ಹೋಗಿದ್ದಾರೆ. ಅಮ್ಮನ ಸೋದರ. ಅಕ್ಕನ ಗಂಡ. ಅತ್ತೆಯ ಗಂಡ. ಅವರೆಲ್ಲ ಈಗ ನಮ್ಮ ಪಾಲಿಗೆ ಅಂಕಲ್‌ಗಳು. ಅವರೊಂದಿಗಿನ ಬಾಂಧವ್ಯವೂ ಶುಷ್ಕ. ಇಲ್ಲೀಗ ದೊಡ್ಡಪ್ಪನೂ ಅಂಕಲ್, ಚಿಕ್ಕಪ್ಪನೂ ಅಂಕಲ್, ಕಿರಾಣಿ ಅಂಗಡಿಯ ಮಾಲೀಕನೂ ಅಂಕಲ್. ಸಂಬಂಧಗಳಲ್ಲೇ ಅತಿ ಪ್ರೀತಿಗೆ ಪಾತ್ರವಾದ ಹೆಚ್ಚಾಗಿ ಮಕ್ಕಳಿಗೆ ಪ್ರಿಯವಾಗಿದ್ದ ಮಾಮ ಈಗ ಕಾಣೆಯಾಗಿರುವನು. ಬರುವಾಗ ಕೈಲಿ ಏನಾದರೊಂದು ಉಡುಗೊರೆ ಹಿಡಿದು ಬರುತ್ತಿದ್ದ ಮಾಮನೆಲ್ಲಿ? ಸಿಕ್ಕಾಕಿಕೊಂಡರೆ ಸಾಕು, ಏನಾದರೊಂದು ಕಸಿಯುವ ಈ ನಗರದ ಮಾಮಗಳೆಲ್ಲಿ? ಇವರನ್ನು ಮಾಮ ಎನ್ನುತ್ತ ನಮ್ಮ ಮಾಮನಿಗೂ ಇವರಿಗೂ ಇವರ ಉದ್ಯೋಗಕ್ಕೂ ಒಟ್ಟಿಗೆ ಅವಮಾನ ಮಾಡುತ್ತಿದ್ದೇವೆ ಅನಿಸುವುದಿಲ್ಲವೇ?

ನನಗಿದ್ದ ಮಾಮ ಅಮ್ಮನ ಅಣ್ಣ. ಅವರು ಈಗ ನೆನಪು ಮಾತ್ರ. ನನ್ನ ಬಾಲ್ಯದ ಮುಖ್ಯ ಭಾಗವನ್ನು ತಾತನ ಮನೆಯಲ್ಲಿ ಕಳೆದಿದ್ದರಿಂದ ನನ್ನ ಮತ್ತು ಮಾಮನ ಸಂಬಂಧ ಕೇವಲ ಹಬ್ಬಹರಿದಿನಗಳ ಭೇಟಿಯಲ್ಲದ ದಿನನಿತ್ಯ ಒಡನಾಟದ ಅವಿನಾಭಾವ ಸಂಬಂಧ. ಆಗಾಗ್ಗೆ ನೆನಪಾಗುತ್ತಾರೆ, ಹಲವಾರು ಕಾರಣಗಳಿಗೆ. ಅವರು ಬೇರೆಯವರ ಮಾಮನಂತೆ ಸಾಮಾನ್ಯನೂ ಆಗಿರಲಿಲ್ಲ. ಬಹಳ ವಿಶೇಷ ವ್ಯಕ್ತಿ. ನೆನೆದಾಗ ಕೆಲವು ಸಲ ಕಣ್ಣು ಒದ್ದೆಯಾಗುತ್ತದೆ.

ನಮ್ಮ ತಾತನಿಗೆ ಐದು ಜನ ಹೆಣ್ಣು ಮಕ್ಕಳು, ಮಾಮ ದೊಡ್ಡ ದೊಡ್ಡಮ್ಮನ ನಂತರದವರು. ಒಬ್ಬನೇ ಮಗ. ಭಾರತೀಯ ಕುಟುಂಬ ವ್ಯವಸ್ಥೆ ಪ್ರಕಾರ ಅವರ ಬದುಕು ಎಷ್ಟು ವಿಜೃಂಭಣೆಯಿಂದ ಕೂಡಿರಬೇಕಿತ್ತು! ಇದೀಗ ಹಿನ್ನೋಟಕ್ಕೆ ಹೊರಳಿದಾಗ ಅವರ ಬದುಕು ದಾರುಣವಾಗಿತ್ತು ಎನಿಸುತ್ತದೆ. ಅಥವಾ ಇನ್ನೂ ದಾರುಣವಾಗಬಹುದಾಗಿದ್ದುದರಿಂದ ತಪ್ಪಿಸಿಕೊಂಡು ಸಹ್ಯ ಬದುಕು ಬಾಳಿದರೇನೋ. ಅದು ಅವರೇ ಹೇಳಬೇಕು, ಆದರೆ ಅವರು ಈಗ ಇಲ್ಲ. ಇದ್ದರೂ ಬಹುಶಃ ಅವರಿಗೆ ಈ ತರಹದ ಉತ್ತರ ಕೊಡಲಾಗುತ್ತಿರಲಿಲ್ಲ. ಇಂದಿನ ವೈಜ್ಞಾನಿಕ ಪರಿಭಾಷೆಯಲ್ಲಿ ಹೇಳಬಹುದಾದರೆ ಅವರಿಗೆ ಕಲಿಕಾ ಊನತೆ, ಲರ್ನಿಂಗ್ ಡಿಸ್ಲೆಕ್ಸಿಯ ಇತ್ತು. ನಮ್ಮಲ್ಲಿ ಯಾವಾಗಲೂ ಅವರಿಗೆ ವಿದ್ಯೆ ಹತ್ತಲಿಲ್ಲ ಅಂತ ಮಾತ್ರ ಹೇಳುತ್ತಿದ್ದರು. ವಿದ್ಯೆ ಎಷ್ಟೋ ಜನಕ್ಕೆ ಹತ್ತುವುದಿಲ್ಲ, ಆದರೂ ಸಾಮಾನ್ಯ ಜ್ಞಾನವುಳ್ಳವರಾಗಿರುತ್ತಾರೆ. ಮನುಷ್ಯ ಭಾವನೆಗಳ ಸಹಜ ಅಭಿವ್ಯಕ್ತಿವುಳ್ಳವರಾಗಿರುತ್ತಾರೆ. ಮಾಮ ತೀರ ಸಹಜರೂ ಅಲ್ಲ, ತೀರ ದಡ್ಡರೂ ಅಲ್ಲ, ಭಾವುಕರೂ ಅಲ್ಲ, ನಿರ್ಭಾವುಕರೂ ಅಲ್ಲ ಎಂಬಂತೆ ಬದುಕಿದ್ದರು. ಅದಷ್ಟೇ ಸಮಸ್ಯೆಯಾಗಿದ್ದಿದ್ದರೆ.

ನಮ್ಮ ತಾತ ಊರಿಗೆ ಹಿರಿಯರು. ಆ ಹಳ್ಳಿ ಹೊಸತಾಗಿ ಹುಟ್ಟಿಕೊಂಡಿದ್ದು ತಾತ ತನ್ನ ಯೌವನದಲ್ಲಿ ಪಕ್ಕದ ಕಿರುಪಟ್ಟಣದಿಂದ ವಲಸೆ ಬಂದು ಜಮೀನು ಮಾಡಿದ್ದರು. ಊರಿನ ಹಳೆಯ ಹೆಸರೇ 'ಹೊಸಗುಡ್ಲು' (ಹೊಸ ಗುಡಿಸಲು) ಎಂದು. ಬಾವಿ ಬೋರ್ ವೆಲ್, ತೋಟ ಗದ್ದೆ, ವಿಶಾಲ ಮನೆ – ಹೀಗೆ ಅಪಾರ ಆಸ್ತಿ ಗಳಿಸಿದ್ದವರಿಗೆ ಐದು ಜನ ಹೆಣ್ಮಕ್ಕಳ ನಡುವೆ ಒಬ್ಬೇ ಒಬ್ಬ ಗಂಡು ಮಗ, ಹೆತ್ತವರಲ್ಲಿ ಅಗಾಧ ನಿರೀಕ್ಷೆ, ಮಾಮ ನೋಡಿದರೆ ಹೀಗೆ! ಇನ್ನೊಬ್ಬ ಮಗ ಹುಟ್ಟಿದ್ದನಂತೆ, ತರುಣಾವಸ್ಥೆಯಲ್ಲಿ ಹಾವು ಕಡಿದು ಸತ್ತನಂತೆ. ಸಹಜವಾಗಿ ಆತ ಬುದ್ಧಿವಂತನೇ ಇರುತ್ತಾನೆ. ಸೃಷ್ಟಿಯ ತಿಕ್ಕಲುತನವೇ ಹಾಗಲ್ಲವೇ. ತಾತ ಅಜ್ಜಿ ಸೇರಿದಂತೆ ಎಲ್ಲರೂ ಇಲ್ಲದ ಮಾಮನನ್ನು ಇರುವ ಮಾಮನನ್ನು ನೆನೆನೆದು ದುಃಖಿಸುತ್ತಿದ್ದುದೇ ಆಗಿತ್ತು. ಮಾಮನಿಗೆ ತಿಳಿವಳಿಕೆ ಕಲಿಸಲು ತಾತ ಬಹಳಾನೆ ಬಡಿಯುತ್ತಿದ್ದರಂತೆ. ಮದುವೆ ವಯಸ್ಸಿಗೆ ಬಂದರೂ ಮಾಮನಲ್ಲಿ ಕಿಂಚಿತ್ ಬದಲಾವಣೆ ಕಾಣಲಿಲ್ಲವಂತೆ. ಇನ್ನು ಹೊರಗಿನಿಂದ ಹೆಣ್ಣು ತಂದರೆ ಸೊಸೆ ಎಲ್ಲಿ ತಮ್ಮನ್ನೆಲ್ಲ ಕಸಬರಿಕೆ ಮಾಡಿಕೊಂಡುಬಿಡುತ್ತಾಳೋ ಎಂಬ ಭಯ. ಜೊತೆಗೆ ಮಗನಿಗಂತೂ ತಿಳಿಯಲ್ಲ, ಸೊಸೆಯೂ ಅಂತವಳೇ ಆದರೆ... ಇಷ್ಟೆಲ್ಲ ಆಸ್ತಿಪಾಸ್ತಿ ನೋಡಿಕೊಳ್ಳುವವರು ಯಾರು? ಮೊದಲಾಗಿ ಏನೂ ಬರದ ಈತನಿಗೆ ಹೊರಗಿನಿಂದ ಹೆಣ್ಣು ಕೊಡುವವರಾದರೂ ಯಾರು? ಕೊಟ್ಟರೂ ಅಂತಹ ಹೆಣ್ಣು ಹೇಗಿರುತ್ತದೆ?

ಯೋಚಿಸಿ ನಮ್ಮ ದೊಡ್ಡ ದೊಡ್ಡಮ್ಮನ ದೊಡ್ಡ ಮಗಳನ್ನು ತಂದುಕೊಂಡರು. ಬೆಂಗಳೂರಿನ ನಗರದಲ್ಲಿ ಒಂಬತ್ತನೆಯ ತರಗತಿಯಲ್ಲಿ ಓದುತ್ತಿದ್ದಂತಹ ಸುಂದರ ಹುಡುಗಿ. ಮದುವೆ ಮಾಡಿ ಮೂರ್ನಾಲ್ಕು ವರ್ಷಗಳ ನಂತರ ಮನೆಗೆ ಕರಕೊಂಡು ಬಂದರಂತೆ. ಅರ್ಥಾತ್ ದೊಡ್ಡವಳಾದ ಮೇಲೆ ಒಲ್ಲೆ ಎಂದುಬಿಡುತ್ತಾಳೇನೋ ಎಂದು ಅಪ್ರಾಪ್ತ ವಯಸಿನಲ್ಲೇ ತಾಳಿ ಕಟ್ಟಿಸಿದ್ದರು. ಸಂಬಂಧದಲ್ಲಿ ನನಗೆ ಅವರು ಅತ್ತೆಗಿಂತಲೂ ಅಕ್ಕ ಮೊದಲು. ಹಾಗಾಗಿ ನಾನು ಅವರನ್ನು ಅಕ್ಕ ಅಂತಲೇ ಕರೆಯುತ್ತೇನೆ. ಇದೆಲ್ಲ ಬಹಳ ಹಿಂದಿನ ಕತೆ. ನಾನು ತಾತನ ಮನೆ ಸೇರುವಷ್ಟರಲ್ಲಿ ಮದುವೆಯಾಗಿ ಹತ್ತು ವರುಷ ಕಳೆದಿರಬಹುದು. ಎಲ್ಲ ಸಮೃದ್ಧ ಮನೆತನಗಳಲ್ಲೂ ಏನೋ ಒಂದು ಊನ ಇದ್ದೇ ಇರುತ್ತದೆ. ಗದ್ದೆ ತೋಟ ದಿನ್ನೆ ಎತ್ತುಗಳು ಎಮ್ಮೆಗಳು ಮಾಡಲು ಕೈಲಾಗದಷ್ಟು ಜಮೀನು. ಮಾಡಿದರೆ ಕೈತುಂಬ ಕೆಲಸ. ಅಕ್ಕ ಅದಾಗಲೇ ಮನೆಗೆ ಹೊಂದಿಕೊಂಡಿದ್ದರು. ತಾತ ಮನೆಯನ್ನಿನ್ನೂ ಮುನ್ನಡೆಸುತ್ತಿದ್ದರು. ಅಲ್ಲಿಗಾಗಲೇ ತಾತ ಮಾಮನಿಗೆ ಬಡಿಯುವುದನ್ನು ಅಕ್ಕ ನಿಲ್ಲಿಸಿದ್ದರು. ಹೆಂಡತಿ ಎದುರೇನೆ ಗಂಡನಿಗೆ ಹೊಡೆಯುವುದನ್ನು ಯಾರು ತಾನೆ ಸಹಿಸಿಕೊಂಡಿರುತ್ತಾರೆ? ಅಕ್ಕ ಮಾಮನಿಗೊಂದು ಘನತೆಯುಕ್ತ ಬದುಕು ಕಟ್ಟಿಕೊಡಲು ಹೆಣಗುತ್ತಿದ್ದರು. ತಾತನಿಗೂ ವಯಸ್ಸಾಗುತ್ತಿತ್ತು. ಸ್ಥಿತ್ಯಂತರದ ಕಾಲ. ಅಕ್ಕನ ಬದುಕು ನೆನೆದರೆ ಪಾಪ ಅನಿಸುತ್ತದೆ. ಮದುವೆಯಾಗಿ ಅಷ್ಟು ವರ್ಷಗಳಾಗಿತ್ತು, ಮಕ್ಕಳೇ ಆಗಿರಲಿಲ್ಲ. ಅಜ್ಜಿಯ ಮನಸಿನಲ್ಲಿ ಮಾಮನಿಗೆ ಇನ್ನೊಂದು ಮದುವೆ ಮಾಡುವ ಆಲೋಚನೆಯೂ ಸುಳಿದಿತ್ತು!

ನನ್ನ ಬಾಲ್ಯದ ಮೂರು ವರುಷಗಳು ಶುರುವಾಗಿದ್ದು ಅಲ್ಲಿಂದ. ನನಗಿದೆಲ್ಲ ಹೊಳೆಯುತ್ತಿರುವುದು ಈಗ. ಆಗೆಲ್ಲ ನಮ್ಮ ಪ್ರಕಾರ ಮಾಮ ಚೆನ್ನಾಗೇ ಇದ್ದರು, ದೈನಂದಿನ ವ್ಯವಸಾಯದ ಕೆಲಸಗಳಲ್ಲಿ ಮೈಮುರಿದು ದುಡಿಯುತ್ತಿದ್ದರು. ಹೊಟ್ಟೆತುಂಬ ಉಣ್ಣುತ್ತಿದ್ದರು. ಗಡತ್ತಾಗಿ ನಿದ್ರೆ ಹೊಡೆಯುತ್ತಿದ್ದರು. ಮಾನವ ಪ್ರಾಣಿಯ ಮೂಲಭೂತ ನಡುವಳಿಕೆಗಳಲ್ಲೇನೂ ವ್ಯತ್ಯಾಸವಿದ್ದಂತೆ ತೋರುತ್ತಿರಲಿಲ್ಲ. ಆದರೆ

ಮನುಷ್ಯ ಭಾವನೆ ಅಂತ ಯೋಚಿಸಿದಾಗ ಅವರು ತುಸು ಭಿನ್ನವಾಗಿ ವರ್ತಿಸುತ್ತಿದ್ದುದುಂಟು. ಕೆಲವೊಮ್ಮೆ ಗಾಡಿಗೆ ವಿಪರೀತ ಕಡಲೆ ಬಳ್ಳಿಯನ್ನೋ ಗೊಬ್ಬರವನ್ನೋ ತುಂಬಿ, ಎತ್ತುಗಳು ಹಳ್ಳವನ್ನು ದಾಟಲಾಗದೇ ಏದುತ್ತಿರುವಾಗ ಅವುಗಳಿಗೆ 'ದನಕ್ಕೆ ಬಡಿದಂಗೆ' ಬಡಿದು, 'ಸಾಯಿಸಿ ಬಿಡ್ತೀಯಲ್ಲೋ ಮೂಕ ಪ್ರಾಣಿಗಳನ್ನ' ಎಂದು ತಾತನಿಂದ ಬೈಸಿಕೊಳ್ಳುತ್ತಿದ್ದರು. ಆಗೆಲ್ಲ ನಾನು ಗಾಡಿಯ ಲಗೇಜಿನ ಮೇಲೆ ಕೂತಿರುತ್ತಿದ್ದೆ, ಸವಾರಿಯ ಮಜಾ ಪಡೆಯಲು! ಮಾಮ ಬಹುಶಃ ಹಿಂದೆ ತನಗೆ ಬಿದ್ದ ಒದೆಗಳನ್ನು ಯಥಾವತ್ತಾಗಿ ಎತ್ತುಗಳಿಗೆ ಸಾಗಹಾಕುತ್ತಿದ್ದರು ಅನಿಸುತ್ತದೆ. ಎತ್ತುಗಳನ್ನು ಗೊಂದಿಗೆಗೆ ಕಟ್ಟಿಹಾಕಿ ಮೇವು ಹಾಕುವಾಗ ಹಿಡಿತ ಮಾಡಿ ತಿರುಗ ಕೋಪಕ್ಕೆ ಗುರಿಯಾಗುತ್ತಿದ್ದರು. ಅವರು ಮನೆಯಲ್ಲಿ ಇನ್ನೊಂದು ಮೂಕ ಎತ್ತಿನಂತೆ ಇದ್ದರು ಎಂದರೆ ಅತಿಶಯೋಕ್ತಿಯೇನಲ್ಲ. ಮೂಕ ಅಂದರೆ ಮಾತಾಡುತ್ತಿರಲಿಲ್ಲ ಅಂತಲ್ಲ, ದಡಬಡನೆ ಹೊ ಹ್ಹೋ ಹೋ ಎಂದು ಜೋರುದನಿಯಲ್ಲಿ ತಾತನ ಮೇಲೆ ರೋಪು ಹಾಕುತ್ತಿದ್ದರು ಎನ್ನಿ, ಆಗೆಲ್ಲ ತಾತ ಅಕ್ಕನಿಗೆ ಅಂತಿದ್ದುಂಟು, ನೀನು ಬಂದು ಅವನಿಗೆ ಸಲಿಗೆ ಕೊಟ್ಟುಬಿಟ್ಟೆ ಎಂದು.

ಮಾಮನಿಗೆ ದುಡ್ಡನ್ನು ಎಣಿಸಲು ಬರುತ್ತಿರಲಿಲ್ಲ. ಅಕ್ಕ ಹೊರಗಿನ ಎಲ್ಲ ವ್ಯವಹಾರಗಳಿಗೂ ಹೋಗಲು ಆಗುತ್ತಿರಲಿಲ್ಲ. ಮಿಲ್ಲಿಗೆ ಸಂತೆಗೆ ಕಳಿಸುವಾಗ ರೂಪಾಯಿ ಬಿಲ್ಲೆಗಳನ್ನು ಮಾಮನಿಂದ ಮುಟ್ಟಿಸಿ ಸವರಿಸಿ ಉಂಟಾಗುವ ವಿಭಿನ್ನ ಅನುಭವಗಳ ಮೇಲೆ ಇದಕ್ಕೆ ಇಷ್ಟು ಬೆಲೆ, ಇಂಥ ವಸ್ತುವಿಗೆ ಇಷ್ಟು ಕಾಯಿನ್ನುಗಳನ್ನು ಕೊಡಬೇಕು ಎಂದು ತಿದಿಯೊತ್ತಿ ಕಳಿಸುತ್ತಿದ್ದರು. ಆಗೆಲ್ಲ ಮಾಮ ಬಹಳ ಎಚ್ಚರವಾಗಿರುತ್ತಿದ್ದರು. ಏನೇ ಹೇಳಿದರೂ ಬಹಳ ಭಯಭಕ್ತಿಯಿಂದ ಎಲ್ಲವನ್ನೂ ಆಲಿಸಿ ಶಿರಸಾವಹಿಸಿ ಪಾಲಿಸುತ್ತಿದ್ದರು. ತನಗೆ ತಿಳಿಯಲ್ಲವೆಂದು ಹೊರಗಿನವರು ಮೋಸ ಮಾಡುತ್ತಾರೆ ಎಂದು ಅವರಿಗೆ ವಿಪರೀತ ಭಯವಿತ್ತು. ಅಂತೆಯೇ ಹಾಲನ್ನು ಡೈರಿಗೆ ಹಾಕಲು ಕಳಿಸುವಾಗ ಅಳತೆಮಾಪನಗಳು ಯಾವುದು ಎಷ್ಟೆಷ್ಟು ಎಂಬ ಬಗ್ಗೆ ಸಾಧ್ಯವಾದಷ್ಟೂ ಶಿಕ್ಷಣ ಕೊಡಲಾಗುತ್ತಿತ್ತು. ಹಾಗಿದ್ದರೂ ವಾಪಸ್ಸು ಬಂದಾಗ ಕಡಿಮೆ ಲೀಟರು ಬರೆದು ಕಳಿಸಿದ್ದಾರೆಂದು, 'ನೀನು ಸರಿಯಾಗಿ ಗಮನಿಸಿಲ್ಲವಲ್ಲೋ' ಎಂದು ಉಗಿಸಿಕೊಳ್ಳುತ್ತಿದ್ದರು. ಅದು ಅವರಿಗೆ ಸ್ವಲ್ಪ ಕಷ್ಟದ ವಿದ್ಯೆಯಾಗಿತ್ತು. ಎಲ್ಲಾ ಗೊತ್ತಿರುವವರಿಗೇನೆ ಮೋಸ ಮಾಡುವ ಜಗತ್ತು ಇದು, ಇನ್ನು ಪಾಪ...

ತಾತನ ಮನೆ ಅತ್ಯಂತ ಶಿಸ್ತಿನ ಮನೆಯಾಗಿತ್ತು. ಅಲ್ಲಿ ವರ್ಷದಲ್ಲಿ ಬರುವ ಎಲ್ಲ ಹಬ್ಬಗಳ ಆಚರಣೆಯಾಗುತ್ತಿತ್ತು. ದೊಡ್ಡ ದೊಡ್ಡ ಹಬ್ಬಗಳಲ್ಲಿ ಹೆಣ್ಣುಮಕ್ಕಳೂ ಮೊಮ್ಮಕ್ಕಳೂ ಅಳಿಯಂದಿರೂ ಸೇರುತ್ತಿದ್ದರು. ವಾರ ವಾರ 'ಶನಿವಾರ' ಮಾಡುತ್ತಿದ್ದರು. ತಾತ ಊರಿನ ಮುಖ್ಯಭಾಗದಲ್ಲಿ ಅಶ್ವತ್ಥ ಕಟ್ಟೆ ಕಟ್ಟಿಸಿದ್ದರು. ಒಂದು ಆಲದ ಮರ, ಒಂದು ಬೇವಿನ ಮರ. ನಡುವೆ ದೇವರ ಗುಡಿ. ಶನಿವಾರ ಅಂದರೆ ನೆಲ ಒಲೆ ತೊಳೆಯುವುದು, ಸ್ನಾನ ಮಾಡುವುದು, 'ಕತೆ' ಓದುವುದು, ಅಶ್ವತ್ಥ ಕಟ್ಟೆಯ ಪೂಜೆ, ತೋಟದಲ್ಲಿನ ತಾವರೆ ಮರಕ್ಕೆ ಪೂಜೆ, ಗೋವಿಂದ ಕೂಗುವುದು, ಊರಿನೋರಿಗೆಲ್ಲ ಪ್ರಸಾದ ಹಂಚುವುದು ಇತ್ಯಾದಿ. ಮಾಮ ಈ ಎಲ್ಲ ಕಾರ್ಯಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಅವರೇ ಮುನ್ನಲೆಯಲ್ಲಿರುತ್ತಿದ್ದರು. ಅವರು ಪೂಜೆ ಮಾಡುವಾಗ ಅವರಲ್ಲಿನ ಭಾವ ಎಂಥದು ಎಂದು ನನಗೆ ಆಗಲೂ ಸೋಜಿಗ, ಈಗಲೂ ಸೋಜಿಗ. ಅಂದರೆ ಅವರ ಭಕ್ತಿಯೆಂಥದು ಎಂದು. ತಾತ ಬೈಯುತ್ತಿದ್ದರು, ಸುಮ್ಮನೆ ಎಮ್ಮೆ ಮೇಲೆ ಮಳೆ ಸುರಿದಂಗೆ ಮಾಡ್ತಾನೆ ಅಂತ. ಅಂದರೆ ಅದೆಲ್ಲ ಯಾಂತ್ರಿಕವಾಗಿತ್ತೋ ಮಾಮನಿಗೆ? ತುಟಿಗಳು ಮಣ ಮಣ ಅಂತಿದ್ದವಲ್ಲ ಅದೇನದು? ರಾಮ ಯಾರು, ಕೃಷ್ಣ ಯಾರು, ಅಸಲಿಗೆ ದೇವರೆಂದರೇನು ಎಂಬುದೂ ಅವರಿಗೆ ಗೊತ್ತಿರಲಿಲ್ಲವೆಂದು ನನ್ನ ಅನಿಸಿಕೆ. ಅಜ್ಜಿ–ತಾತನ ಅಷ್ಟೊಂದು ಪೂಜೆ ಪುನಸ್ಕಾರಕ್ಕೆ ಯಾವ ದೇವರೂ ಕಿವಿ ಕೊಡಲಿಲ್ಲವೆಂಬುದು ನೋವಿನ ಸಂಗತಿ.

ಮಾಮನ ದೈವ ಪರಿಕಲ್ಪನೆ ಹೇಗೆ ಶೂನ್ಯವಾಗಿತ್ತೋ ಅಂತೆಯೇ ದೆವ್ವ ಪರಿಕಲ್ಪನೆಯೂ ಶೂನ್ಯವಾಗಿತ್ತು. ದೇವರಿದ್ದರೆ ಅಲ್ಲವೇ ದೆವ್ವವು. ನಡುರಾತ್ರಿ ಕತ್ತಲೆಯಲ್ಲಿ ತೋಟಕ್ಕೆ ನೀರು ಹಾಯಿಸುತ್ತಿದ್ದರು. ಎಲ್ಲಿಯಾದರೂ ಸರ ಸರ ಎಂದು ಸದ್ದು ಬಂದರೆ ಹೆದರುತ್ತಿರಲಿಲ್ಲ, ಬದಲಾಗಿ ಮಗ್ಗುಲಲ್ಲಿದ್ದ ಕವಣೆಗೆ ಕಲ್ಲು ಸೇರಿಸಿ ಬೀಸುತ್ತಿದ್ದರು. ಒಮ್ಮೆ ಒಂದು ಕರಡಿಯ ಅಂಡಿಗೆ ಬಿದ್ದು ಅದು ತಪ್ಪಿಸಿಕೊಂಡು ಓಡಿಹೋಗಿತ್ತು. ಬಿದ್ದು ಉಂಟು ಮಾಡಿದ ಗುಳಿಯಿಂದ ಉದುರಿದ ಕೂದಲುಗಳಿಂದ ನಮಗೆ ಅದು ಕರಡಿಯೆಂದು ಗೊತ್ತಾಗಿದ್ದುದು. ಮನೆಯಲ್ಲೊಂದು ನಾಯಿಯಿತ್ತು. 'ರಾಜ' ಎಂದು ಅದರ ಹೆಸರು. ಅವನೊಂಥರ ಮನೆಗೆ ಹಿರಿಯ, ಮಾರ್ಗದರ್ಶಿ. ಬೀದಿ ನಾಯಿಗಳ ತಂಟೆಗೆ ಹೋಗದ, ಹೇಲು ಮೂಸದ, ಮನೆ ಕಾಯುವ ಇಲ್ಲವೇ ಹೊಲ ಕಾಯುವ, ಇಲ್ಲವೇ ಮನೆ ಮಂದಿಗೆ ಜೊತೆಯಾಗುವ, ಊರಿಗೇ ಮರ್ಯಾದಸ್ಥನೆಂದು ಹೆಸರುವಾಸಿಯಾಗಿದ್ದ ಕಪ್ಪು ನಾಯಿ ರಾಜ. ಹಗಲಾಗಲೀ ಇರುಳಾಗಲೀ ರಾಜ ನಮಗೆ ನಿರಂತರ ಸಂಗಾತಿಯಾಗಿರುತ್ತಿದ್ದನು. ಓಟವೂ ಅಲ್ಲದ ನಡಿಗೆಯೂ ಅಲ್ಲದ ಒಂದು ಗತ್ತಿನ ಲಯದಲ್ಲಿ ಚಲಿಸುತ್ತಿದ್ದನು. ರಾತ್ರಿ ಭರ್ತಿ ಮುದ್ದೆ ಹೊಡೆದು ಮಜ್ಜಿಗೆ ಕುಡಿದು ಹೆಗಲ ಮೇಲೆ ಕಂಬಳಿ, ಒಂದು ಕೈನಲ್ಲಿ ಬೆತ್ತ ಇನ್ನೊಂದು ಕೈನಲ್ಲಿ 'ಬ್ಯಾಟರಿ' ಹಿಡಿದು ಹೊರಟರೆ, ದಟ್ಟ ಕತ್ತಲಲ್ಲಿ ರಾಜ ಮುಂದೆ, ನಾನು ನಡುವೆ, ಮಾಮ ಹಿಂದೆ. ನಮ್ಮ ಪ್ರಯಾಣವು ಮಂಚಿಕೆ ಕಡೆಗೆ. ಕಡಲೆ ಬಳ್ಳಿಗಳಿಗೆ ಗುಣಿಯಿಡುವ ಹಂದಿ ಕಾಯಲು, ತೆಂಗಿನಕಾಯಿ ಕಳ್ಳರನ್ನು ಕಾಯಲು. 'ಸೆಲ್ಲು ಡೌನಾಗುತ್ತದೆಂದು' ಅಮವಾಸ್ಯೆಯಲ್ಲೂ ಬ್ಯಾಟರಿ ಹೊತ್ತಿಸುತ್ತಿರಲಿಲ್ಲ



ಪುಣ್ಯಾತ್ಮ ಮಾಮ. ಅವರಿಗೆ ಲೆಕ್ಕ ಬರದಿದ್ದರೂ ಯಾವ ಗೊನೆಯಲ್ಲಿ ಎಷ್ಟು ಕಾಯಿ ಕಾಣೆಯಾಗಿದೆ ಎಂದು ಗೊತ್ತಾಗುತ್ತಿತ್ತು, ಬಹುಶಃ ಚಿತ್ರಸ್ಮರಣಾ ಶಕ್ತಿ ಇತ್ತೆನಿಸುತ್ತದೆ. 'ಒಂದೆರಡು ಕಾಯಿ ಹೋದರೂ ಚಿಂತೆಯಿಲ್ಲ, ಅಮವಾಸ್ಯೆ ಇರುಳಲ್ಲಿ ಹೋಗಬೇಡವೋ' ಎಂದು ಅಜ್ಜಿ ತಾತ ಗೋಗರೆದರೂ ಕೇಳದೆ ಹೊರಟುಬಿಡುತ್ತಿದ್ದರು. ಅಂತಹ ದಿವಸ ನಮಗೂ ಹೊರಹೋಗುವ ಅವಕಾಶವಿರುತ್ತಿರಲಿಲ್ಲ. ಕೆಲವೊಮ್ಮೆ ರಾಜನೂ ಬೇಸತ್ತು ಮನೆಗೆ ಬಂದು ಹಿಟ್ಟಂಡು ಅಂಗಳದಲ್ಲಿ ಗೋಣಿಚೀಲದ ಮೇಲೆ ಮುದುರಿಬಿಡುತ್ತಿದ್ದ. ಆಗೆಲ್ಲ ಮಾಮ ಒಬ್ಬರೇ ಇರುತ್ತಿದ್ದರು. ಅವರಿಗೆ ಅಮಾವಾಸ್ಯೆ ಹುಣ್ಣಿಮೆಗಳ ನಡುವೆ ಬೆಳಕೊಂದು ಬಿಟ್ಟು ಇನ್ನಾವ ಅಂತರ ಕಾಣಿಸುತ್ತಿರಲಿಲ್ಲ.

ನಮ್ಮೂರಿನ ಶಾಲೆಗೂ ಅಲ್ಲಿನ ಶಿಕ್ಷಕರಿಗೂ ನಮ್ಮ ಮನೆಗೂ ಒಂದು ಬಗೆಯ ಅನ್ಯೋನ್ಯ ಸಂಬಂಧ ಇತ್ತು. ತಾತ ಶಾಲೆ ಕಟ್ಟಲು ಜಮೀನು ದಾನ ಮಾಡಿದ್ದರು. ಶಾಲೆಯ ಮುಖ್ಯ ದಿನಾಚರಣೆಗಳಿಗೆ ಗಣ್ಯ ಅತಿಥಿಯಾಗಿರುತ್ತಿದ್ದರು. ಅಲ್ಲಿನ ಒಬ್ಬ ಶಿಕ್ಷಕಿಗೆ ಮಜ್ಜಿಗೆಯಂದರೆ ಪ್ರಾಣ. ಘಮಘಮ ಸಾರೆಂದರೆ ಬಲು ಇಷ್ಟ. ಅದು ನಮ್ಮ ಮನೆಯಿಂದ ನಿತ್ಯವೂ ಸರಬರಾಜಾಗುತ್ತಿತ್ತು. ಅವರು ವರ್ಗಾವಣೆಯಾದ ಬಳಿಕ ಇನ್ನೊಬ್ಬ ಶಿಕ್ಷಕಿ ಬಂದರು. ಅವರಿಗೆ ಹೂಗಳೆಂದರೆ ಪ್ರಾಣ. ನಮ್ಮ ಮನೆಯ ಕಾಂಪೋಂಡಿನಲ್ಲಿ ದುಂಡುಮಲ್ಲಿಗೆ, ದಾಸವಾಳ ಇತ್ಯಾದಿ ಹೂಗಳಿದ್ದವು. ಅಕ್ಕ ಅವನ್ನು ಕಿತ್ತು ಯಾರಿಂದಲಾದರೂ ಟೀಚರಿಗೆ ತಲುಪಿಸುತ್ತಿದ್ದರು. ಒಮ್ಮೆ ಮಾಮನ ಕೈಲಿ ಕಳಿಸಿದ್ದರು. ಆಗ ನಾನು ತರಗತಿಯ ಮಣೆಯ ಮೇಲೆ ಕೂತಿದ್ದೆ. ಟೀಚರು ಟೇಬಲ್ಲಿನ ಮೇಲೆ ಕೂತಿದ್ದರು, ಮಾಮ ಬಡಬಡನೆ (ಅವರದು ದೊಡ್ಡ ಕಾಲು) ಬಂದರು, ದಾಸವಾಳವನ್ನು ಟೇಬಲ್ಲಿನ ಮೇಲಿಟ್ಟರು, ತಿರುಗಿ ಹಾಗೇ ಬಡಬಡನೆ ಹೋಗಿಬಿಟ್ಟರು. ಅಷ್ಟೂ ಸಮಯ ಅವರ ಕಣ್ಣು ನೆಲ ನೋಡುತ್ತಿತ್ತು. ಒಂದು ಕೈ ತಲೆ ಕೆರೆದುಕೊಳ್ಳುತ್ತಿತ್ತು. ಟೀಚರು ಮಾಮ ಬಂದ ವೇಗಕ್ಕೆ ಮೊದಲು ಗಾಬರಿ ಬಿದ್ದು ಹೂ ಇಸಕೊಂಡು ತಲೆಗೆ ಮುಡಿಯುತ್ತ ಥ್ಯಾಂಕ್ಸ್ ಹೇಳಲು ತಲೆಯೆತ್ತಿದರೆ ವ್ಯಕ್ತಿ ಮಾಯ! ಮನುಷ್ಯ ಸಹಜವಾದ ನಾಚಿಕೆ ಸಂಕೋಚಗಳೆಲ್ಲ ಮಾಮನಿಗೂ ಇತ್ತೆನಲು ನನಗಿರುವ ಸಾಕ್ಷ್ಯಿಯಿದು.

ಕಾಲಾನಂತರ ಅವರಿಗೆ ಕೊನೆಗೂ ಒಂದು ಗಂಡು ಮಗು ಹುಟ್ಟಿತು. ಅದು ಮನೆಮಂದಿ ಬಂಧುಬಳಗಕ್ಕೆಲ್ಲ ಅತೀವ ಸಂತಸದ ಗಳಿಗೆ. ಕೊನೆಗೂ ದೇವರು ಕಣ್ಣುಬಿಟ್ಟ ಎನ್ನುತ್ತಿದ್ದರು ಎಲ್ಲರೂ. ಆ ಹೊತ್ತಿಗೆ ನಾನಾಗಲೇ ದೂರದ ವಸತಿ ಶಾಲೆ ಸೇರಿದ್ದೆ. ನನ್ನ ಅಮ್ಮ ಆ ಸಂಭ್ರಮವನ್ನು ಹಂಚಿಕೊಳ್ಳಲೆಂದೇನೆ ಸುದ್ದಿಯನ್ನು ಹೊತ್ತುಕೊಂಡು ನನ್ನ ಕಾಣಲು ಬಂದಿದ್ದರು. ತೊಟ್ಟಿಲ ಸಂಭ್ರಮದಲ್ಲಿ ನಾನು ಭಾಗಿಯಾಗಿದ್ದೆ. ಮಾಮನ ಸಂಭ್ರಮ ನನ್ನ ಸ್ಮೃತಿಯಲ್ಲಿ ಉಳಿದಿಲ್ಲ. ಬಹುಶಃ ಉಳಿದವರ ಸಂಭ್ರಮದ ನಡುವೆ ಅವರಿಗೆ ಅಲ್ಲಿ ಜಾಗವೇ ಇರಲಿಲ್ಲವೆನಿಸುತ್ತದೆ. ಅದೂ ಇದೂ ಸಾಮಾನು ಹೊಂದಿಸಿಕೊಡುವುದರಲ್ಲಿ



ತಲ್ಲೀನರಾಗಿದ್ದ ನೆನಪು. ಅವರು ಫೋಟೋಗಳಲ್ಲಿ ಕಾಣಿಸಿಕೊಂಡಿದ್ದೂ ಕಡಿಮೆ. ಆದರೆ ತೋಟದಲ್ಲಿ ನಾನು ಒಂಟಿಯಿರುವಾಗಲೆಲ್ಲ ನನ್ನೊಂದಿಗೆ ಅವರು ಹೇಳುತ್ತಿದ್ದುದು ಒಂದೇ ಮಾತು, 'ನೀವೆಲ್ಲ ನನ್ನ ಮಗನನ್ನು ಚನ್ನಾಗಿ ನೋಡಿಕೊಳ್ಳಬೇಕಪ್ಪೋ. ಅವನ ಇದ್ಯಾಭ್ಯಾಸಕ್ಕೆ ಎಲ್ಲ ಅನುಕೂಲ ಮಾಡಿಕೊಡಬೇಕಪ್ಪೋ... ಸ್ವಾನೆ ಖರ್ಚಾಗುತ್ತದಂತೆ ಪರವಾಗಿಲ್ಲ... ಒಟ್ಟಿನಲ್ಲಿ ಅವನು ಸಂದಾಕೆ ಓದಿ ದೊಡ್ಡ ಆಫೀಸರಾಗಬೇಕಪ್ಪೋ...' ಎಂದು. ಅದಾಗಲೇ ನಾನು ಶೈಕ್ಷಣಿಕವಾಗಿ ಮುಂದಿದ್ದೆ ಎಂದು ಹೆಸರಾಗಿತ್ತು, ಹಾಗಾಗಿ ಅವರ ಹಿಂದಿಂದೆ ಪುಟ್ಟ ಪುಟ್ಟ ಹೆಜ್ಜೆ ಇಟ್ಟು ಓಡಾಡುತ್ತಿದ್ದ ನಾನು ಅವರ ದೃಷ್ಟಿಯಲ್ಲಿ ಕೆಲವೇ ವರ್ಷಗಳಲ್ಲಿ ದೊಡ್ಡವನಾಗಿಬಿಟ್ಟಿದ್ದೆ!

ಇದೆಲ್ಲ ಈಗಿನ ಮಧುರ ಭಾವನೆ. ನಾನು ಅವರೊಂದಿಗೆ ವಾಸಿಸುವಾಗ ನಮಗೆ ಅವರ ಮೇಲೆ ಸ್ವಲ್ಪ ಬೇಸರ ಇತ್ತು. ಅವರಿಗೆ ಬೆಂಗಳೂರಿಂದ ಬರುವ ಅಕ್ಕನ ಬಳಗದ ಮೇಲೆ ಹೆಚ್ಚು ಅಕ್ಕರೆ. ಅವರ ದೇಖರೇಖಿ ಚೆನ್ನಾಗಿ ನಡೆಸುತ್ತಿದ್ದರು. ಬಿಸ್ಲೇರಿ ಬಾಟಲಿನಲ್ಲಿ ಎಳನೀರು ತುಂಬಿಸಿ ಕೊಡುತ್ತಿದ್ದರು. ಉಳಿದ ನಾಲ್ವರು ಅವರ ಮಕ್ಕಳ ಬಗ್ಗೆಯಿದ್ದ ಆಸ್ಥೆ ತುಸು ಕಡಿಮೆಯೆ. ಅದೆಲ್ಲ ಮಡದಿ ಮೇಲಿನ ಪ್ರೀತಿಯೆಂಬುದೂ ನಮಗೆ ಗೊತ್ತಾಗುತ್ತಿತ್ತು. ಆದರೂ ಅವರ ಅಂತಃಕರಣ ಕೆಲವೊಮ್ಮೆ ವಿಶಿಷ್ಟವಾಗಿ ತುಡಿಯುತ್ತಿತ್ತು. ಒಮ್ಮೆ ಏನಾಯಿತೆಂದರೆ... ನಾನು ಊರಿನ ಹುಡುಗರೊಂದಿಗೆ ಸೇರಿ ಹರಿಸೇವೆಯ ಆಟವಾಡುತ್ತಿದ್ದೆ. ಕಲ್ಲು ಮಣ್ಣುಗಳನ್ನು ಕಲಸಿ ಸಣ್ಣ ಮನೆ ಕಟ್ಟುವುದು, ತೆಂಗಿನ ಹೀಸೆಯಿಂದ ಮಾಳಿಗೆ ಕಟ್ಟುವುದು. ಅದರೊಳಗೆ ಮೂರು ಕಲ್ಲುಗಳನ್ನು ದೇವರಂತೆ ಕೂರಿಸುವುದು. ಪುಟ್ಟ ಒಲೆ ಜೋಡಿಸಿ ಕುಂಬಾರರ ಗಾವುಸಿಯಿಂದ ಒಡೆದ ಕುಡಿಕೆ ತಂದು ಹಿಡಿ ಅಕ್ಕಿ ಸುರಿದು ಅನ್ನ ಬೇಯಿಸಿ, ತೋಟದೊಳಗಿನ ಟಮಾಟ, ಬದನೇಕಾಯಿ, ಮೆಣಸಿನಕಾಯಿ ಕಿತ್ತು ಕೆಂಡದಲ್ಲಿ ಸುಟ್ಟು ಕಿವುಚಿ ಸಾರು ಮಾಡಿ ಮುತ್ತುಗದೆಲೆ ಮುಂದೆ ಎಲ್ಲರನ್ನೂ ಕೂರಿಸಿ ಒಂದೊಂದೇ ತುತ್ತು ಅನ್ನ ಬಡಿಸಿ ಆಡುವ 'ಹರಿಸೇವೆ' ಆಟವದು. ಪೂಜೆಯ ಹೊತ್ತಿಗೆ ಶಿವ ಎಂಬುವವನು (ಅವನು ಈಗಿಲ್ಲ, ಈಜಾಡಲು ಹೋಗಿ ನೀರುಪಾಲಾದ) 'ದೇವರಿಗೆ ಎಡೆಯಿಡಬೇಕಲ್ಲ' ಎಂಬ ಸಮಸ್ಯೆಯನ್ನು ಎದುರಿಟ್ಟನು. ಎಲ್ಲರಿಗೂ ಹೌದೆನಿಸಿತು. ಎಡೆಯೆಂದರೆ ಮಾಮೂಲಿ ಅನ್ನ ಸಾರು ಆಗದು, ವಿಶೇಷ ತಿಂಡಿಯಾಗಿರಬೇಕು. ಅಂಗಡಿಯಿಂದ ತಿನಿಸು ತಂದು ಎಡೆಯಿಡುವುದು ಎಂದು ನಿಶ್ಚಯವಾಯಿತು. ಸರಿ ಅದಕ್ಕೆ ದುಡ್ಡು? ಎಲ್ಲರ ಚಿತ್ತ ನನ್ನತ್ತ. 'ಹೋಗಿ ನಿಮ್ಮ ತಾತನ ಜೇಬಿಂದ ನಾಕಾಣೆ ತಾ' ಎಂದು ಐಡಿಯಾ ಕೊಟ್ಟರು. ನಾನು ಅದೂ ಇದೂ ಯೋಚಿಸಿ ದೇವರಿಗಲ್ಲವೇ ರಕ್ಷಿಸುತ್ತಾನೆಂದು ಬಗೆದು ಓಡಿಹೋಗಿ ತಾತನ ಕೋಟಿನಿಂದ ನಾಕಾಣೆ ತಂದುಕೊಟ್ಟೆ. ಹರಿಸೇವೆ ಸಾಂಗವಾಗಿ ಜರುಗಿತು. ಎಡೆಯೂ ಎಲ್ಲರ ನಾಲಿಗೆ ಸವರಿತು. ಸಂಜೆ ಮನೆಯಲ್ಲಿ ತಾತ 'ನನ್ನ ನಾಕಾಣೆ ಎಲ್ಲಿಗೋಯಿತು' ಎಂದು ಗದರಿಕೊಂಡರು.

ಹಣಕಾಸಿನ ವಿಚಾರದಲ್ಲಿ ಕಟ್ಟುನಿಟ್ಟಿನ ಸಂಸಾರವದು. ನಾಕಾಣೆಯಲ್ಲ, ನಾಕು ಪೈಸೆಯೂ ಲೆಕ್ಕಕ್ಕೆ ಸಿಗುತ್ತಿತ್ತು. ಯಾರೂ ಯಾವುದಕ್ಕೂ ಬಳಸಿಲ್ಲವೆಂದಾದರೆ ಎಲ್ಲಿ ಹೋಯಿತು? ಅಕ್ಕ ಬರಲು ತಗೊಂಡು ಬಂದರು. ನನಗೆ ತೊಡೆ ನಡುಗಲಾರಂಭಿಸಿದವು. ಮನೆತುಂಬ ಅಟ್ಟಾಡಿಸಿಕೊಂಡು ಬಿಗಿಯಲಾರಂಭಿಸಿದರು. ಸಾಮಾನ್ಯವಾಗಿ ನನ್ನ ಪರ ವಹಿಸುತ್ತಿದ್ದ ಅಜ್ಜಿ (ಮೊಮ್ಮಗನೆಂಬ ಪ್ರೀತಿಯೂ ಸೊಸೆ ಮೇಲಿನ...) ಅವತ್ತು ಸುಮ್ಮನಿದ್ದರು, ಕಳ್ಳತನದ ಪರ ವಹಿಸುವುದೆಂತ? ಏನಾದರೂ ವಹಿಸಿದ ಕೆಲಸ ಸರಿ ಮಾಡಿಲ್ಲದಾಗ, ತಾತ್ಸಾರದಿಂದ ಅಡ್ಡಾದಿಡ್ಡಿ ಮಾಡಿದ್ದಾಗ ಆಗಾಗ್ಗೆ ನನಗೆ ಪೂಜೆಯಾಗುತ್ತಿದ್ದುದುಂಟು. ಅವತ್ತು ಹಿತ್ತಲಿನ ಕಾಂಪೋಂಡಿನ ತನಕ ಓಡಿದ್ದೆ. ಅಲ್ಲಿಗೂ ಬಿಡದೆ ಬಂದಿದ್ದರು ಅಕ್ಕ. ಅದೆಲ್ಲಿದ್ದರೋ ಮಾಮ ಆಗ ತಾನೆ ದನ ಹೊಡೆದುಕೊಂಡು ಹಿತ್ತಲಿನ ಗೇಟು ತೆಗೆದು ಪ್ರತ್ಯಕ್ಷರಾದರು. ನನ್ನ ಜೀವ ಮರಳಿತು. ಓಡಿ ಹೋಗಿ ಅವರ ತೊಡೆ ಸಂದಿಯಲ್ಲಿ ಹುದುಗಿದೆ. ಮಾಮ, 'ಸುಮ್ಕಿರಣೆ, ಸಣ್ಣುಡುಗನ್ನ ಯಾಕೆ ಹಂಗೆ ಬಡಿತಿ' ಎಂದು ಬಿಡಿಸಿದರು. ಇದು ಆಗಾಗ್ಗೆ ಪುನರಾವರ್ತನೆ ಆಗುತ್ತಿದ್ದಂತಹ ಘಟನೆ. ಅಕ್ಕ ತನ್ನ ದುರ್ದೈವದ ಸಿಟ್ಟನ್ನೆಲ್ಲ ನಮ್ಮ ಮೇಲೆ ತೀರಿಸಿಕೊಳ್ಳುತ್ತಿದ್ದರು ಅನಿಸುತ್ತದೆ. ಸರಿಯಾಗಿ ಬಾರಿಸುತ್ತಿದ್ದರು. ಆಗೆಲ್ಲ ನನ್ನ ಕಣ್ಣುಗಳು ಮಾಮನನ್ನೇ ಹುಡುಕುತ್ತಿದ್ದವು. ಆ ದಿನ ಹಿತ್ತಲಿನ ಕಾಂಪೋಂಡಿನ ತನಕ ಓಡಿದ್ದೂ ಅದೇ ಕಾರಣಕ್ಕೆ. ನನ್ನ ಅದೃಷ್ಟ ಚೆನ್ನಾಗಿದ್ದರೆ ಮಾಮ ಪ್ರತ್ಯಕ್ಷರಾಗುತ್ತಿದ್ದರು, ಇಲ್ಲಾಂದರೆ ಇಲ್ಲ. ಪ್ರತ್ಯಕ್ಷರಾದಾಗಲ್ಲ ನಾನು ಅವರ ಮಡಿಲಲ್ಲಿ ಹುದುಗುವುದು, ಅವರು ಅಕ್ಕನ ಕೈಲಿಂದ ಬರಲು ಕಿತ್ತುಕೊಳ್ಳುವುದು. ನಂತರ ತೋಟಕ್ಕೆ ಕರೆದೊಯ್ದು ಎಳನೀರು ಕುಡಿಸಿ ಸಮಾಧಾನ ಪಡಿಸುವುದು. ನನ್ನ ಜೀವಮಾನದಲ್ಲೇ ಕಳ್ಳತನವೆಂದೇನಾದರೂ ಮಾಡಿದ್ದರೆ ಆ ನಾಕಾಣೆ. ಅದೇ ಮೊದಲು, ಅದೇ ಕೊನೆ. ಇಂದಿಗೂ ಬಿಡದೆ ನನ್ನನ್ನು ಹಿಂಸಿಸುತ್ತಿದೆ ಅದು.

ಮಾಮನ ಮಮತೆ ತುಡಿಯುತ್ತಿದ್ದುದು ಹೀಗೆ. ಇದಕ್ಕಿಂತ ದೊಡ್ಡ ಉಡುಗೊರೆ ಯಾರಿಗಾದರೂ ಸಿಗುವುದುಂಟೇ?

ನಾನು ವಿಧ್ಯಾಭ್ಯಾಸದ ಸಲುವಾಗಿ ಹೊರಗೆ ಬಂದನೋ ಆಮೇಲೆ ಅತ್ತ ಹೋಗುವುದು ಕಡಿಮೆಯಾಯಿತು. ರಜಾ ದಿನಗಳಲ್ಲಿ ಒಂದು ಸುತ್ತು ಎಲ್ಲ ಊರುಗಳನ್ನು ಸುತ್ತಿ ಎಲ್ಲ ಬಂಧುಗಳನ್ನು ಮಾತನಾಡಿಸಿ ಬರುವುದು ವಾಡಿಕೆಯಾಯಿತು. ತಾತನಿಗೆ ಅಜ್ಜಿಗೆ ವಯಸ್ಸಾಗಿ ಮೂಲೆ ಹಿಡಿದರು. ಒಂದು ಮಟ್ಟಿಗೆ ಮಾಮನಿಗೂ ವಯಸ್ಸಾಗಿತ್ತು. ರಾಜನಿಗೂ ಕೂಡ! ಒಮ್ಮೆ ಊರಿಗೆ ಹೋದಾಗ ಮಾಮ 'ಯಾಕೋ ಕೈ ಸ್ವಾಧೀನ ಬತ್ತಿಲ್ಲ ಅಪಯ' ಎಂದು ನೋವು ತೋಡಿಕೊಂಡರು. ಕೈಯಾಡುತ್ತಿತ್ತು, ಅದರಿಂದ ಏನನ್ನೂ ಎತ್ತಲು ಇಳಿಸಲು ಬರುತ್ತಿರಲಿಲ್ಲ. ಅದಾದ ಮುಂದಿನ ವರ್ಷಕ್ಕೆ ಆ ಕೈ ಸಂಪೂರ್ಣ ನಿಷ್ಕ್ರಿಯವಾಗಿತ್ತು. ತನ್ನದಲ್ಲದ ವಸ್ತು ದೇಹಕ್ಕೆ ಜೋತುಬಿದ್ದಂತೆ ತೋರುತ್ತಿತ್ತು. ಇನ್ನೊಂದು ವರ್ಷಕ್ಕೆ ಇನ್ನೊಂದು ಕೈ ಬಿತ್ತು. ಇನ್ನೆರಡು ವರ್ಷಕ್ಕೆ ಮಾತೇ ಬಿದ್ದೋಯ್ತು. ಪ್ರತಿ ವಾರ್ಷಿಕ ರಜೆಗೆ ಹೋದಾಗಲೆಲ್ಲ ಒಂದೊಂದು ಹಂತ. ಗೆದ್ದಲು ಹಿಡಿದ ಮರ ಹಂತಹಂತವಾಗಿ ಕುಸಿದಂತೆ. ಆಮೇಲೆ ಸಂಪೂರ್ಣ ಹಾಸಿಗೆ ಹಿಡಿದರು. ಮಲಗಿದಲ್ಲಿಂದ ಏಳಲಾಗದೆ ಬೆನ್ನಿನಲ್ಲಿ ಕುರ ಎದ್ದವು. ಹಾಸಿಗೆ ಮೇಲೆಯೆ ಹೇಲುಚ್ಚೆಯೆಲ್ಲ. ಅಕ್ಕ ಸತತ ಹತ್ತು ವರುಷ ಮೊದಲು ತಾತನ, ಆಮೇಲೆ ಗಂಡನ ಹೇಲುಚ್ಚೆ ಬಾಚಿಹಾಕುತ್ತ ಕಳೆದರು.

ಎರಡೆರಡು ವರುಷಗಳ ಅಂತರದಲ್ಲಿ ತಾತ ಹೋದರು, ಅಜ್ಜಿ ಹೋದರು, ಮಾಮನೂ ಹೋದರು. ಇವರ ನಡುವೆ ರಾಜ ಯಾವಾಗ ಹೋದನೆಂದು ನೆನಪಾಗುತ್ತಿಲ್ಲ. ಅವನಂತೂ ತೀರ ಮುದುಕನಾಗಿದ್ದ. ನಾಯಿಗಳು ತಮ್ಮ ಸಾವು ಹತ್ತಿರವಾಗುತ್ತಿದ್ದಂತೆ ಒಡೆಯನನ್ನು ತೊರೆದು ಏಕಾಂತ ಹೊರಟುಬಿಡುತ್ತಾವಂತೆ. ಪ್ರಾಣಿಗಳಿಗೂ ಸನ್ಯಾಸಾಶ್ರಮ ಎಂಬುದಿದೆಯಲ್ಲ. ಅಥವಾ ಅವುಗಳಿಂದಲೇ ನಾವು ಕಲಿತಿದ್ದೆ? ರಾಜ ಮೂಲೆ ಬಿದ್ದವನು ಒಂದಿನ ಇದ್ದಕ್ಕಿದ್ದಂತೆ ಎದ್ದು ಹೋದನಂತೆ. ಎತ್ತ ಹೋಗಿ ಪ್ರಾಣ ತ್ಯಜಿಸಿದನೆಂದು ಹುಡುಕಿದರಂತೆ. ಕಳೇಬರವೂ ಸಿಕ್ಕಲಿಲ್ಲವಂತೆ. ಅಲ್ಲಿಗಾಗಲೆ ಅಕ್ಕ ಮಗನನ್ನು ವಿದ್ಯಾಭ್ಯಾಸಕ್ಕೆಂದು ಬೆಂಗಳೂರು ಸೇರಿಸಿದ್ದರು. ಏಕಾಏಕಿ ಮನೆ ಬಿಕೋ ಅನ್ನಲಾರಂಭಿಸಿತು! ಅಷ್ಟು ದೊಡ್ಡ ತುಂಬಿ ತುಳುಕುತಿದ್ದ ಮನೆಯಲ್ಲಿ ಅಕ್ಕ ಒಬ್ಬರೇ! ಬಂದುಹೋಗುತ್ತಿದ್ದ ಮೊಮ್ಮಕ್ಕಳೆಲ್ಲ ಉದ್ಯೋಗ, ಮದುವೆ, ಮಕ್ಕಳಲ್ಲಿ ನಿರತರಾಗಿ ಹೆಣ್ಮಕ್ಕಳು ಅವರೂ ಮುದುಕಿಯರಾಗಿ, ಮನೆಗೆ ಬರುವವರೂ ವಿರಳವಾಗಿ, ಆಕೆ ಅದೆಷ್ಟು ಒಂಟಿತನ ಅನುಭವಿಸಿರಬೇಡ! 'ನೀವಾದ್ರೂ ಅವಗವಾಗ ಬಂದು ಹೋಗ್ರೋ' ಎನ್ನುತ್ತಿದ್ದರು.

ಮಾಮ ಬದುಕಿನುದ್ದಕ್ಕೂ ಬೈಗುಳ, ಹೊಡೆತ ನಿಂದನೆಯಲ್ಲೇ ಕಳೆದರೆಂದು ಅನಿಸುತ್ತದೆ. ಹೊಡೆತ ಬಿಟ್ಟು ಮಿಕ್ಕಾವುದೂ ಅವರಿಗೆ ತಟ್ಟಿರಲಿಕ್ಕಿಲ್ಲ ಎಂದು ಒಮ್ಮೊಮ್ಮೆ ಅನಿಸಿದರೂ ನಮಗೇನು ಗೊತ್ತು ಅವರ ಅಂತರಂಗ? ಏನನ್ನೂ ವ್ಯಕ್ತಪಡಿಸದ ಜೀವವದು. ಬಹುಶಃ ಅವರು ಈ ಕಾಲದಲ್ಲಿ ಜನಿಸಿದ್ದರೆ ಅವರ ಬದುಕು ತುಸು ಉತ್ತಮವಾಗಿರುತ್ತಿತ್ತೇನೋ? ಏನು ಮಾಡುವುದು, ನಾವೆಲ್ಲ ಆಯಾ ಕಾಲದ ಹೊರೆಯನ್ನು ಬೆನ್ನಿಗೆ ಕಟ್ಟಿಕೊಂಡೇ ಭೂಮಿಗೆ ಇಳಿದವರಲ್ಲವೇ?

ಈಗೀಗ ಯಾರಾದರೂ ಮಾಮ ಎಂದರೆ ಕಸಿವಿಸಿಯಾಗುತ್ತದೆ. ಎಲ್ಲ ಉದ್ಯೋಗಗಳಿಗೂ ಒಂದು ಘನತೆ ಅಂತ ಇರುತ್ತದೆ. ಸ್ವಂತ ಮಾಮ ಇರಲಿ ಬಿಡಲಿ, ನಾವು ಯಾರೂ ವೃತ್ತಿ ಘನತೆಗೆ ಧಕ್ಕೆ ಉಂಟು ಮಾಡಬಾರದು. ನಮ್ಮ ದೇಶದಲ್ಲಿ ಇದು ದೊಡ್ಡ ಸಮಸ್ಯೆ. ಬೀದಿ ಕಸ ಗುಡಿಸುವ ಬಿಬಿಎಂಪಿ ಕಾರ್ಮಿಕರನ್ನೂ 'ಸರ್, ಮೇಡಂ, ನೀವು, ತಾವು' ಎಂದೇ ಸಂಬೋಧಿಸಬೇಕು, ಆ ಮಟ್ಟಿಗೆ ನಾವು ಬೌದ್ಧಿಕವಾಗಿ ಬೆಳೆಯಬೇಕು. ಕಾರ್ಮಿಕರನ್ನು 'ಹೋಗೋ ಬಾರೋ' ಎನ್ನುತ್ತ ಪೋಲೀಸರು ಎದುರಾದ ತಕ್ಷಣ 'ಸರ್' ಎಂದು ಕೈಕಟ್ಟುವುದು ನಾವೆಷ್ಟು ಕುಬ್ಜರು ಎಂದು ತೋರಿಸುತ್ತದೆ.